(ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, 'ಅ' ಪ್ರಶ್ನೆಗೆ ಮಾನ್ಯ ಸಚಿವರು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ತಿಳಿಸಿದ್ದಾರೆ. ಆದರೆ ಎಷ್ಟೋ ಸಲ ಸಹಕಾರ ಸಂಘಗಳ ಮೂಲಕ ಹಾಗೂ ಶಾಖೆಗಳ ಮೂಲಕ ಸರ್ಕಾರಕ್ಕೆ ಮನವಿಯನ್ನೂ ಒಪ್ಪಿಸಲಾಗಿತ್ತು. ಈ ವಿಷಯ ಕುರಿತು ಚರ್ಚೆ ಆಗಿದೆ. ಸರಿಯಾಗಿ ಪ್ರಯತ್ನ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಭರವಸೆಯನ್ನೂ ಸಂಬಂಧಪಟ್ಟ ಮಂತ್ರಿಗಳು ಕೊಟ್ಟಿದ್ದಾರೆ. ಇನ್ನೂ ಒಂದು ಪ್ರಶ್ನೆಯನ್ನು ನಾನು ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ಯಾವ ಯಾವ ಸಂಘಗಳು ನೂಲನ್ನು ಎಷ್ಟು ಕೇಳಿದ್ದಾರೆ ಹಾಗೂ ಎಷ್ಟು ನೂಲನ್ನು ಸಪ್ಲೈ ಮಾಡಲಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಮಾನ್ಯ ಸಚಿವರು ಒದಗಿಸಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರು ಈ ಬಗ್ಗೆ ಅಂಕಿ ಅಂಶಗಳನ್ನು ಕೇಳಿದ್ದಾರೆ, ಅದನ್ನು ಒದಗಿಸಿಕೊಡುತ್ತೇನೆ. ಆದರೆ ಅವರು ಇಲ್ಲಿ ಹೇಳಿರುವ ಪ್ರಕಾರ ಯಾವ ತೊಂದರೆಯೂ ಆಗಿಲ್ಲ. ಮಾನ್ಯ ಸದಸ್ಯರು ಎಲ್ಲಿಯಾದರೂ ತೊಂದರೆಯಾಗಿದೆ ಎಂದು ಇದರ ಬಗ್ಗೆ ನನ್ನ ಗಮನಕ್ಕೆ ತಂದರೆ ಅದನ್ನು ಸರಿಪಡಿಸಿಕೊಡುತ್ತೇನೆ.

ಶ್ರೀ ಕೆ ಕುಶಾಲ.—ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳು ಡಿ. ಸಿ. ಸಿ. ಬ್ಯಾಂಕ್ ಮೂಲಕ ನೇಕಾರರಿಗೆ ಸಾಲ ನೀಡುತ್ತವೆ. ಇದರ ಜೊತೆಗೆ ಸಹಕಾರ ಸಂಘಗಳು ೪ ಪರ್ಸೆಂಟ್ ಸಹಾಯ ಧನ ನೀಡಬೇಕು. ಆದರೆ ಕಳೆದ ನಾಲ್ಕು ವರ್ಷಗಳಿಂದ ಸಹಾಯಧನವನ್ನು ಯಾಕೆ ನೀಡಲಿಲ್ಲ ಎಂದು ಕೇಳುತ್ತೇನೆ? ಸಾಲವನ್ನು ಪಡೆದುಕೊಂಡ ನೇಕಾರರುಗಳು ಸಹಾಯಧನ ಸಿಕ್ಕದೇ ಇರುವುದರಿಂದ ಬಹಳ ಕಷ್ಟ ಪಡುತ್ತಿದ್ದಾರೆ. ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಇದು ನಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು ಅಲ್ಲ. ಇದು ಸಹಕಾರ ಇಲಾಖೆಗೆ ಬರುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಪ್ರಶ್ನೆಯನ್ನು ಬೇರೆ ರೂಪದಲ್ಲಿ ಕೇಳಲಿ.

ಯುರೇನಿಯಂ ಮತ್ತು ಥೋರಿಯಂ ನಿಕ್ಷೇಪಗಳ ಬಗ್ಗೆ

೧೫೮ (೬೩೫) ಶ್ರೀ ನಂಜಪ್ಪ (ಶ್ರೀ ಪಿ. ಎಂ. ಚಿಕ್ಕಬೋರಯ್ಯ ರವರ ಪರವಾಗಿ).—ಮಾನ್ಯ ಸಣ್ಣ ಪ್ರಮಾಣದ ಉದ್ದಿಮೆಗಳ ಹಾಗೂ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮೈಸೂರು ಜಿಲ್ಲೆಯಲ್ಲಿ ಯುರೇನಿಯಂ ಮತ್ತು ಥೋರಿಯಂ ನಿಕ್ಷೇಪಗಳೆಷ್ಟಿವೆ ?

ಆ) ಹಾಗಿದ್ದಲ್ಲಿ ಅವುಗಳಲ್ಲಿ ದೊರಕುವ ಅಣು ಶಕ್ತಿ ಇಂಧನಗಳ ಪ್ರಮಾಣವೆಷ್ಟು ?

ಇ) ಅವುಗಳನ್ನು ಶಾಂತಿಯುತ ಕಾರ್ಯಗಳ ಬಳಕೆಗಾಗಿ ಉಪಯೋಗಿಸಲು ಯೋಚಿಸಿದ್ದೀರಾ ? ಹಾಗಿದ್ದರೆ ಆ ಕಾರ್ಯಕ್ರಮಗಳಾವುವು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಮೈಸೂರು ಜಿಲ್ಲೆಯಲ್ಲಿ ಯುರೇನಿಯಂ ಮತ್ತು ಥೋರಿಯಂ ನಿಕ್ಷೇಪಗಳ ಅನ್ವೇಷಣೆ ನಡೆಸಿಲ್ಲ.

ಆ) (ಅ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇದನ್ನು ನಾವು ಮಾಡುವುದಿಲ್ಲ, ಕೇಂದ್ರ ಸರ್ಕಾರದವರು ಮಾಡುತ್ತಾರೆ.

ಕೆ. ಇ. ಬಿ. ಯವರು ಖಾಸಗಿಯವರಿಂದ ವಿದ್ಯುತ್‌ಕಂಬಗಳನ್ನು ಖರೀದಿಸುವುದು

೧೫೯ (೬೮೫) ಶ್ರೀ ಕೆ. ಪ್ರಭಾಕರಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ವಿದ್ಯುತ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—